18	D.Kannada	533
19	Dharwad	515
20	Gadag	362
21	Gulbarga	1370
22	Haassan	854
23	Haveri	430
24	Kodagu	277
25	Kolar	639
26	Koppala	450
27	Mandya	720
28	Mysore	1065
29	Ramnagar	559
30	Raichur	679
31	Shimoga	592
32	Tumkur	1108
33	Udupi	268
34	U.Kannada	426
	TOTAL	**20366**

156 ಶ್ರೀ ನರಸಿಂಹ ನಾಯಕ (ರಾಜು ಗೌಡ)

ಕೃಷಿ ಸಚಿವರು

ಅ. ಕರ್ನಾಟಕ ಸರ್ಕಾರದಿಂದ ಚೈನಾ ಪ್ರವಾಸಕ್ಕೆ ತೆರಳಿರುವ ರೈತರ ಒಟ್ಟು ಸಂಖ್ಯೆ ಎಷ್ಟು?

ಕರ್ನಾಟಕ ಸರ್ಕಾರದಿಂದ ಚೈನಾ ಪ್ರವಾಸಕ್ಕೆ ತೆರಳಿರುವ ರೈತರ ಒಟ್ಟು ಸಂಖ್ಯೆ 633.

ಆ. ರೈತರು ಎಂದಾದರೆ ನಿಖರವಾದ ಸಂಖ್ಯೆ ಎಷ್ಟು?

ರೈತರ ನಿಖರವಾದ ಸಂ. 633.

157 ಶ್ರೀ.ನರಸಿಂಹ ನಾಯಕ (ರಾಜುಗೌಡ)

ಕೃಷಿ ಸಚಿವರು

ಅ) ರಾಜ್ಯದಲ್ಲಿ ಸಣ್ಣ ಕೃಷಿಕರಿಗೆ ಸಹಾಯ ಧನ ಆಧಾರದ ಮೇಲೆ ಬಿಡುಗಡೆ ಮಾಡಲಾದ ಅನುದಾನ ಎಷ್ಟು?

2008–09ನೇ ಸಾಲಿನಲ್ಲಿ ಖುಷ್ಕಿ ಬೇಸಾಯವನ್ನು ಅವಲಂಬಿಸಿರುವ ಸಣ್ಣ ಮತ್ತು ಅತಿ ಸಣ್ಣ ರೈತ ಕುಟುಂಬಗಳಿಗೆ ತಲಾ ರೂ.1000/– ಸಹಾಯಧನ ನೀಡಲು ಕರ್ನಾಟಕ ಸರ್ಕಾರವು ರೂ.220.00 ಕೋಟಿಗಳ ಅನುದಾನ ಬಿಡುಗಡೆ ಮಾಡಲಾಗಿದೆ.

ಆ) ಟ್ರಾಕ್ಟರ್ ಮತ್ತು ಇನ್ನಿತರ ಉಪಕರಣಗಳಿಗೆ ಸಹಾಯಧನ ಯಾವ ರೀತಿ ನೀಡಲಾಗಿದೆ.

ಕೇಂದ್ರ ಸರ್ಕಾರದಿಂದ ಅನುಮೋದನೆಗೊಂಡ ಟ್ರಾಕ್ಟರ್ ಪವರ್ ಟೆಲ್ಲರ್ ಮಾದರಿಗಳಿಗೆ ಮಾತ್ರ ಸಹಾಯಧನ ನೀಡಲಾಗುತ್ತಿದೆ.

ಸಹಾಯಧನ ನಿಗದಿಪಡಿಸಲು ಇಲಾಖೆಯು ದರ ಕರಾರು ಪ್ರಕ್ರಿಯೆಯನ್ನು ಜರುಗಿಸುತ್ತದೆ. ದರ ಕರಾರು ಪ್ರಕ್ರಿಯೆಯಲ್ಲಿ ಅನುಮೋದನೆಗೊಂಡ ಟ್ರಾಕ್ಟರ್, ಪವರ್ ಟೆಲ್ಲರ್, ಹೈಟೆಕ್ ಕೃಷಿ ಉಪಕರಣಗಳು. ಡೀಸಲ್ ಪಂಪ್ ಸೆಟ್ಗಳು. ಟ್ರಾಕ್ಟರ್/ ಪವರ್ ಟೆಲ್ಲರ್/ಎಂಜಿನ್ ಚಾಲಿತ ಸಸ್ಯ ಸಂರಕ್ಷರಣಾ ಉಪಕರಣಗಳು ನವೀನ ಕೃಷಿ ಯಂತ್ರೋಪಕರಣಗಳು. ಕೃಷಿ ಸಂಸ್ಕರಣ ಘಟಕಗಳ ಮಾದರಿಗಳಿಗೆ ಸಹಾಯಧನವನ್ನು ನೀಡಲಾಗುವುದು.

ಕೇಂದ್ರ ಸರ್ಕಾರದಿಂದ ಅನುಮೋದಿತ ಟ್ರಾಕ್ಟರ್ ಮಾದರಿಗಳಿಗೆ ರೂ.60000/– ಹಾಗೂ ಪವರ್ ಟೆಲ್ಲರ್ ಗಳಿಗೆ ಶೇ.50/– ಗರಿಷ್ಠ ರೂ. 50000/– ಗಳ ಸಹಾಯಧನವನ್ನು ನೀಡಲಾಗುವುದು ಕೃಷಿ ಯಂತ್ರೋಪಕರಣಗಳಿಗೆ ದರಕರಾರು ಪ್ರಕ್ರಿಯೆಯಲ್ಲಿ ಅರ್ಹಗೊಂಡ ಸಂಸ್ಥೆಗಳ ವಿವಿಧ ಮಾದರಿಗಳಿಗೆ ಶೇ.50 ಅಥವಾ ಇಲಾಖೆಯಿಂದ ನಿಗದಿಪಡಿಸಿದ ಸಹಾಯಧನವನ್ನು ಯಾವುದು ಕಡಿಮೆಯೊ ಅದನ್ನು ನೀಡಲಾಗುವುದು. ಯಾವುದೇ ಸಂಸ್ಥೆಗಳ ಉಪಕರಣಗಳ ದರವನ್ನು ಅನುಮೋದಿಸದೆ ಸದರಿ ಮಾದರಿಗಳಿಗೆ ಸಹಾಯಧನವನ್ನು ಮಾತ್ರ ನಿಗದಿಪಡಿಸಲಾಗಿದೆ ವಿವಿಧ ಉಪಕರಣಗಳಿಗೆ ನಿಗದಿಪಡಿಸಿದ ಗರಿಷ್ಠ ಹಾಗೂ ಕನಿಷ್ಠ ಸಹಾಯಧನದ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಅನುಮೋದಿತ ಮಾದರಿಯ ದರವನ್ನು ಅನುಮೋದಿತ ತಯಾರಕರೊಂದಿಗೆ ಅಥವಾ ತಯಾರಕರಿಂದ ನೇಮಿಸಲ್ಪಟ್ಟ ಅನುಮೋದಿತ ಡೀಲರ್ಗಳೊಂದಿಗೆ ರೈತರು ಚರ್ಚಿಸಿ ದರ ನಿಗದಿಪಡಿಸಿಕೊಳ್ಳಬಹುದಾಗಿದೆ ಹಾಗೂ ರೈತರು ಎಲ್ಲಾ ಅಗತ್ಯ ದಾಖಲೆಗಳೊಂದಿಗೆ ತಮ್ಮ ವಂತಿಗೆಯನ್ನು ಡಿಡಿ ಮೂಲಕ ಪಾವತಿಸಿ ಇಚ್ಚಿಸಿದ ಅನುಮೋದಿತ ಸವಲತ್ತಿಗೆ ಸಹಾಯಧನವನ್ನು ಪಡೆಯಬಹುದಾಗಿದೆ. ಸವಲತ್ತನ್ನು ಪಡೆಯಲು ಬ್ಯಾಂಕ್ ಸಾಲವನ್ನು ಪಡೆದಿದ್ದಲ್ಲಿ ಸಹಾಯಧನವನ್ನು ಕಡ್ಡಾಯವಾಗಿ ಸಾಲ ನೀಡಿದ ಬ್ಯಾಂಕ್ ಖಾತೆಗೆ ನೀಡಲಾಗುವುದು.

ಅನುಬಂಧ–1

ವಿಧಾನ ಸಭೆ ಪ್ರ.ಸಂ. 157

2008–09 ನೇ ಸಾಲಿನ ಕೃಷಿ ಯಾಂತ್ರೀಕರಣ ಮತ್ತು ಕೃಷಿ ಸಂಸ್ಕರಣಾ ಘಟಕಗಳಿಗೆ ನೀಡುತ್ತಿರುವ ಸಹಾಯಧನದ ಮೊತ್ತ:

ಕ್ರ ಸಂ	ಘಟಕ	ಅನುಮೋದಿತ		ನಿಗದಿಪಡಿಸಿದ ಸಹಾಯ ಧನದ ಮೊತ್ತ (ರೂ)	
		ಮಾದರಿಗಳು	ಸಂಸ್ಥೆಗಳು	ಕನಿಷ್ಟ	ಗರಿಷ್ಟ
1.	ಡೀಸಲ್ ಪಂಪ್‌ಸೆಟ್‌ಗಳು.	16	7	8750	19828
2.	ಸಸ್ಯ ಸಂರಕ್ಷಣಾ ಉಪಕರಣಗಳು	18	10	2450	45000
3.	ಬಹು ಬೆಳೆ ಒಕ್ಕಣೆ ಯಂತ್ರ	21	37	36500	55000
4.	ರೋಟವೇಟರ್	16	20	40000	50000
5.	ಭತ್ತದ ಪ್ಲಾಂಟರ್	3	3	44500	65000
6.	ಶುಗರ್ ಕೇನ್ ಥ್ರ್ಯಾಶ್ ಕಟ್ಟರ್	1	1	60000	60000
7.	ಸ್ಟಬಲ್ ರಿಮೂವರ್ / ರೋಟೋ ಸ್ಲಾಶರ್	3	3	23500	49250
8.	ಮೈಜ್ ಶೆಲ್ಲರ್	11	10	22000	55000
9.	ಹಾರ್ವೆಸ್ಟರ್ ಕಮ್ ರೀಪರ್	6	7	13750	70000
10.	ಕಂಬೈನ್ ಹಾರ್ವೆಸ್ಟರ್	3	2	300000	300000
11.	ಎಂ.ಬಿ.ಪ್ಲೋ	22	31	11350	50000
12.	ಪೋಸ್ಟ್ ಹೋಲ್ ಡಿಗ್ಗರ್	7	10	17000	55000
13.	ಡಿಸ್ಕ್ ಪ್ಲೋ	9	6	9250	24800
14.	ಡಿಸ್ಕ್ ಹ್ಯಾರೋ	5	13	20750	51750
15.	ಟಿಲಿಸ್ಕೋಪಿಕ್ ಪ್ರೂನರ್	3	4	4600	24000
16.	ಗ್ರಾಸ್ / ವೀಡ್ ಸ್ಲಾಶರ್	15	18	8150	55000
17.	ಪವರ್ ಚೈನಾ ಸಾ	5	6	14250	25000
18.	ಶೇಂಗ ಡಿಗ್ಗರ್	2	2	19500	38500
19.	ಶೇಂಗ ಡಿಕಾರ್ಟಿಕೇಟರ್	4	6	29000	47000

20.	ಲೂಪ್ ಟೈಪ್ ಶೇಂಗಾ ಸ್ಟ್ರಿಪರ್	2	2	13000	65000
21.	ಕೋಕನಟ್ ಫ್ರಾಂಡ್ ಚಾಪರ್	6	3	17750	39750
22.	ಚಾಪ್ ಕಟರ್	5	11	3600	26750
23.	ವಿನೋಯಿಂಗ್ ಫ್ಯಾನ್	2	2	8250	12500
24.	ಫರೋ ಒಪನರ್ / ರಿಡ್ಜರ್	2	2	13250	14600
25.	ಸೀಡ್ ಕಮ್ ಫರ್ಟಿಲೈಸರ್ ಡ್ರಿಲ್	11	17	6150	28500
26.	ಲೆವಲರ್ ಬ್ಲೇಡ್	3	7	3000	10500
27.	ಕಲ್ಟಿವೇಟರ್	15	33	2819	17850
28.	ಟ್ರೆಂಚರ್/ಡೀಪ್ ಟ್ರೆಂಚರ್	1	2	16500	16500
29.	ಕೇಜ್ ವೀಲ್	6	7	1750	19700
30.	ಶುಗರ್ ಕೇನ್ ಸೆಟ್ ಕಟ್ಟರ್ ಅಂಡ್ ಪ್ಲಾಂಟರ್	2	1	60000	60000
31.	ಟ್ರಾಪಿಕಲ್ಟರ್	1	1	50000	50000
32.	ಪವರ್ ಆಪರೇಟೆಡ್ ಕೋನೋ ವೀಡರ್	1	1	15500	15500
33.	ಶುಗರ್ ಕೇನ್ ಸ್ಟ್ರಿಪ್ಪರ್	1	1	44500	44500
34.	ದಾಲ್ ಪ್ರೊಸೆಸರ್	4	6	20000	52000
35.	ಮಿನಿ ರೈಸ್ ಮಿಲ್	4	4	39500	60000
36.	ಮಿನಿ ಆಯಿಲ್ ಎಕ್ಸ್‌ಪೆಲ್ಲರ್	4	5	44000	65000
37.	ರಾಗಿ ಪಾಲಿಶಿಂಗ್ ಮೆಷಿನ್	2	2	19000	24000
38.	ರಾಗಿ ಕ್ಲೀನಿಂಗ್ ಮೆಷಿನ್	3	7	27000	33500
39.	ಶುಗರ್‌ಕೇನ್ ಕ್ರಶಿಂಗ್ ಯೂನಿಟ್	6	11	32000	55000
40.	ಫ್ಲೋರ್ ಮಿಲ್	6	9	9100	18100
41.	ಪಲ್ವರೈಸರ್	7	6	8250	18900
42.	ರವಾ ಕ್ಯಾಟಲ್ ಫೀಡ್ ಮೆಷಿನ್	6	5	6850	21750
43.	ಚಿಲ್ಲಿ ಪೌಂಡಿಂಗ್ ಮೆಷಿನ್	6	8	12600	22000
44.	ಶಾವಿಗೆ ಮೆಷಿನ್	2	9	11850	14500

45.	ಅರೆಕಾ-ಡಿ-ಹಸ್ಕರ್	3	4	27750	60000
46.	ಸೋಲಾರ್ ಡ್ರೈಯರ್	1	1	11025	65000
ಒಟ್ಟು		282	363	-	-

158 ಶ್ರೀ ನರಸಿಂಹ ನಾಯಕ (ರಾಜುಗೌಡ)

ಪಿ.ಎಂ.ನರೇಂದ್ರಸ್ವಾಮಿ(ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಅಂಗನವಾಡಿ ಕಾರ್ಯಕರ್ತೆಯರಾಗಿ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವವರನ್ನು ಖಾಯಂಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುತ್ತಿದೆ.

ಅಂಗನವಾಡಿ ಕಾರ್ಯಕರ್ತೆಯರು ಗೌರವ ಧನದ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುತ್ತಾರೆ. ದಿನಾಂಕ: 7-12-2006ರ ಮಾನ್ಯ ಸರ್ವೋಚ್ಚನ್ಯಾಯಾಲಯದ ಆದೇಶದಲ್ಲಿ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರು ಸರ್ಕಾರಿ ನೌಕರರಲ್ಲವೆಂದು ಆದೇಶಿಸಿರುತ್ತದೆ. ಆದ್ದರಿಂದ ಇವರನ್ನು ಖಾಯಂ ಗೊಳಿಸಲು ಅವಕಾಶವಿರುವುದಿಲ್ಲ.

ಆ) ಹಾಗಿದ್ದಲ್ಲಿ, ಈಗ ಯಾವ ಹಂತದಲ್ಲಿದೆ?

ಉದ್ಭವಿಸುವುದಿಲ್ಲ.

2 ಶ್ರೀ ಪಾಟೀಲ್ ಎ.ಎಸ್.

ಅ. ಕಳೆದ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ರೈತರ ಸಾಲ ಮನ್ನಾ ಯೋಜನೆ ಅಡಿಯಲ್ಲಿ ಭಾರಿ ಪ್ರಮಾಣದಲ್ಲಿ ಹಣ ದುರುಪಯೋಗವಾಗಿರುವುದು ನಿಜವೇ? ಈ ಕುರಿತು ತನಿಖೆ ನಡೆಸಲಾಗಿದೆಯೇ?

ರೈತರ ಸಾಲ ಮನ್ನಾ ಯೋಜನೆ ಅಡಿಯಲ್ಲಿ ಭಾರಿ ಪ್ರಮಾಣದಲ್ಲಿ ಹಣ ದುರುಪಯೋಗವಾಗಿರುವುದು ನಿಜವಲ್ಲ. ಪಿಕಾರ್ಡ್ ಬ್ಯಾಂಕ್ ನಿ., ಶಿಗ್ಗಾವಿಯಲ್ಲಿ 31 ಪ್ರಕರಣಗಳಲ್ಲಿ ರೂ.3.20 ಲಕ್ಷಗಳ ಹಾಗೂ ಪಿಕಾರ್ಡ್ ಬ್ಯಾಂಕ್ ನಿ., ಚಿಕ್ಕೋಡಿಯಲ್ಲಿ 135 ಪ್ರಕರಣಗಳಲ್ಲಿ ರೂ.73.97 ಲಕ್ಷಗಳ ಹಣ ದುರುಪಯೋಗವಾಗಿರುತ್ತದೆ. ಈ ಕುರಿತು ಸಹಕಾರ ಇಲಾಖೆಯ ಹಿರಿಯ ಅಧಿಕಾರಿಗಳ ಮೂಲಕ ತನಿಖೆ ಮಾಡಿಸಲಾಗಿದೆ.

ಆ. ಹಾಗಿದ್ದಲ್ಲಿ, ಸದರಿ ಹಣ ದುರುಪಯೋಗ ಆಗಿರುವ ತನಿಖೆ ಯಾವ ಸ್ವರೂಪದ್ದು? ಹಗರಣದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಬ್ಯಾಂಕುಗಳು ಮತ್ತು ಸಂಘಗಳು ಭಾಗಿಯಾಗಿವೆ?

ಮಹಾಲೇಖಪಾಲರ ವಿಶೇಷ ತಂಡವು ಸರ್ಕಾರದ ಸಾಲ ಮನ್ನಾ ಯೋಜನೆಯಡಿ 10 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳನ್ನು, ಸದರಿ ಬ್ಯಾಂಕುಗಳಿಗೆ